(ಗೊಂದಲ)

ಉಪಾಧ್ಯಕ್ಷಣಿಯವರು : ಮಾನ್ಯ ಚಂದ್ರೇಗೌಡರು ಮತ್ತು ಮಾನ್ಯ ಬಸವರಾಜ ಅಟ್ಟೂರ್‌ರವರು ಗಮನ ಸೆಳೆಯುವ ಸೂಚಿಸಿ ಪ್ರಸ್ತಾಪ ಮಾಡಬೇಕು.

ಶ್ರೀ ಎಸ್.ಹೆಚ್. ಕೌಜಲಗಿ : ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು.

ಉಪಾಧ್ಯಕ್ಷಣಿಯವರು : ಜೀರೋ ಅವರ್ ಮುಗಿದುಹೋಯಿತು.

(ಗೊಂದಲ)

ಕೃಷ್ಣ ಮೇಲ್ದಂಡೆ ಯೋಜನೆಯ ಪುನರ್ವಸತಿ ಸೌಕರ್ಯ

ಶ್ರೀ ಎಸ್.ಹೆಚ್. ಕೌಜಲಗಿ : ವಸತಿ ಸೌಕರ್ಯವನ್ನು ಒದಗಿಸುವುದರಲ್ಲಿ ಕೈಗೊಂಡ ಕ್ರಮ ಕುಂಠಿತವಾಗಿರುದರಿಂದ ವಿಶ್ವ ಬ್ಯಾಂಕ್ ಈ ಕ್ರಮವನ್ನು ಕೈಗೊಂಡಿದೆ ಎಂದು ತಿಳಿದುಬರುತ್ತದೆ. ಹೀಗಾಗಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ನೀಡುತ್ತಿರುವ ಆರ್ಥಿಕ ಧನವನ್ನು ವಿಶ್ವಬ್ಯಾಂಕ್‌ನವರು ಕಳೆದ 2 ತಿಂಗಳಿಂದ ಸ್ಥಗಿತಗೊಳಿಸಿದೆ ಎಂದು ತಿಳಿದುಬರುತ್ತಿದೆ. ನಾವು 2000ನೇ ಇಸವಿಯೊಳಗೆ ಈ ಯೋಜನೆಯನ್ನು ಪೂರ್ತಿ ಮುಗಿಸುತ್ತೀರಾ ಎಂದು ನಾವು ಕೇಳುತ್ತಿದ್ದೇವೆ. ಆದರೆ ಸರ್ಕಾರದವರು ಗ್ರ್ಯಾಂಟ್‌ಗೆ ಸಂಬಂಧಪಟ್ಟ ಅಕೌಂಟ್ಸ್‌ನ್ನು ಕೊಡದಿದ್ದರೆ ಮತ್ತು ಎರಡನೆಯದಾಗಿ ಈ ಕೆಲಸವನ್ನು ಮಾಡದೇ ಇರುವುದರಿಂದ ವಿಶ್ವಬ್ಯಾಂಕ್‌ನವರು ಕೊಡತಕ್ಕ ಹಣವನ್ನು ಸ್ಥಗಿತಗೊಳಿಸಿದ್ದಾರೆಂದು ತಿಳಿದುಬಂದಿರುವುದರಿಂದ ಸರ್ಕಾರದವರು ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆಂದು ನಾನು ಕೇಳಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ನಾಳೆ ಉತ್ತರ ಕೊಡುತ್ತೇನೆ.

ಗಮನ ಸೆಳೆಯುವ ಸೂಚನೆಗಳು.

ರಾಜ್ಯದಲ್ಲಿರುವ ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳು.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಉಪಾಧ್ಯಕ್ಷಣಿಯವರೇ, ರಾಜ್ಯದಲ್ಲಿಯ ಗ್ರಾಮಾಂತರ ಪ್ರದೇಶಗಳಲ್ಲಿ ಕಡಿಮೆ ಸಂಬಳದಲ್ಲಿ ಸೇವೆ ಸಲ್ಲಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆ ಈಡೇರಿಸುವ ಬಗ್ಗೆ ಮಾನ್ಯ ಸಮಾಜಕಲ್ಯಾಣ ಮಂತ್ರಿಗಳ ಗಮನ ಸೆಳೆಯುತ್ತೇನೆ.

MADAM DEPUTY SPEAKER: Since the Hon'ble Minister is in the Upper House, we shall take up this matter afterwards.

Sri D.B. Chandregowda : This is a question of procedure.

ಉತ್ತರಗಳಾದರೂ ಬರಬೇಕಲ್ಲ.

ಉಪಾಧ್ಯಕ್ಷಣಿಯವರು : ಉತ್ತರಗಳನ್ನು ಕಳಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಸ್ಟೇಟ್‌ಮೆಂಟ್ ಬಂದಿಲ್ಲ ಎಂದರೆ Why did you include it in the Agenda? Having included in the Agenda,

ಸ್ಟೇಟ್‌ಮೆಂಟ್ ಬಂದಿಲ್ಲವೆಂದರೆ ಇದನ್ನು ಹೊಸದಾಗಿ ಕಲಿಯಬೇಕಾಗುತ್ತದೆ. There is a certain procedure.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ : ಇಡೀ ರಾಜ್ಯದಲ್ಲಿರುವ ಅತಿ ಮಹತ್ವದ ಗಂಭೀರವಾದ ಪ್ರಶ್ನೆ ಇದು. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿಕೆ ನೀಡಬೇಕು.

ಉಪಾಧ್ಯಕ್ಷಣಿಯವರು : ಮಾನ್ಯ ಮಂತ್ರಿಗಳು ಬರುತ್ತಾರೆ ಬಂದ ತಕ್ಷಣ ಹೇಳಿಕೆ ಕೊಡುತ್ತಾರೆ. ಈಗ ಇನ್ನೊಂದು ಕಾಲಿಂಗ್ ಅಟೆನ್‌ಷನ್ ತೆಗೆದುಕೊಳ್ಳೋಣ.

ಯುಗಚಿ ನದಿಗೆ ಹೊಸದಾಗಿ ಸೇತುವೆ ನಿರ್ಮಾಣದ ಬಗ್ಗೆ.

ಶ್ರೀ ಬಿ.ಹೆಚ್. ಲಕ್ಷಣಯ್ಯ : ಮಾನ್ಯ ಉಪಾಧ್ಯಕ್ಷಣಿಯವರೇ, ಬೇಲೂರು ಪಟ್ಟಣದ ಯಗಚಿ ನದಿಗೆ ಹೊಸದಾಗಿ ಸೇತುವೆ ನಿರ್ಮಾಣ ಮಾಡುವ ಬಗ್ಗೆ ಮಾನ್ಯ ಲೋಕೋಪಯೋಗಿ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆ ಮಾಡುವುದಕ್ಕೆ ಇಚ್ಛಿಸುತ್ತೇನೆ.

ಈ ಸೇತುವೆಯು, ಚಿಕ್ಕಬಳ್ಳಾಪುರ-ಮೂಡಿಗೆರೆ ರಾಜ್ಯ ಹೆದ್ದಾರಿ ರಸ್ತೆಯ 251 ಕಿ.ಮೀ.ನಲ್ಲಿ ಯಗಚಿ ಹೊಳೆಗೆ ಅಡ್ಡಲಾಗಿ ಬರುತ್ತದೆ. ಈ ರಸ್ತೆಯು ಯಗಚಿ ನದಿಯನ್ನು ದಾಟಿ ಬೇಲೂರು ಪಟ್ಟಣದ ಮೂಲಕ ಹಾದು ಹೋಗುತ್ತದೆ. ಸದರಿ ಸೇತುವೆಯು ಕಲ್ಲಿನ ಕಮಾನು ಕಟ್ಟಡದ್ದಾಗಿದ್ದು, ಸುಮಾರು ನೂರು ವರ್ಷಗಳ ಹಿಂದೆಯೇ ಕಟ್ಟಲಾಗಿದೆ. ಈ ಸೇತುವೆಯ ಮೇಲೆ ಏಕಮುಖ ವಾಹನ ಸಂಚಾರಕ್ಕೆ ಮಾತ್ರ ಸೌಲಭ್ಯವಿದ್ದು 4.3 ಮೀಟರ್ ಅಗಲವಿರುತ್ತದೆ.

ಸೇತುವೆಯ ನಡುಕಂಬಗಳ ಬಳಿ ಅನಧಿಕೃತವಾಗಿ ಮರಳು ತೆಗೆಯುತ್ತಿದ್ದುದರಿಂದ ಕೊರೆತ ಕಂಡುಬಂದಿತ್ತು. ಇದನ್ನು ದುರಸ್ತಿಪಡಿಸಲಾಗಿದೆ. ಗುದ್ದುಗಂಬದ (ಅಬಟ್‌ಮೆಂಟ್) ಬಳಿ ಆಗಿರುವ ಕೊರತೆಯನ್ನು ದುರಸ್ತಿಪಡಿಸಲಾಗುತ್ತಿದೆ.

ಈ ಸೇತುವೆಯ ಮೇಲೆ ಏಕಮುಕ ವಾಹನ ಸಂಚಾರಕ್ಕೆ ಮಾತ್ರ ಸೌಲಭ್ಯವಿರುವುದರಿಂದ ದ್ವಿಮುಖ ಸಂಚಾರಕ್ಕೆ ಅಡಚಣೆಯಾಗುತ್ತದೆ. ದ್ವಿಪಥದ ಹೊಸ ಸೇತುವೆಯನ್ನು ನಿರ್ಮಾಣ ಮಾಡಲು ಸುಮಾರು 75 ಲಕ್ಷ ರೂ.ಗಳಾಗುವುದೆಂದು ಅಂದಾಜು ಮಾಡಲಾಗಿದೆ.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : ಈ ಸೇತುವೆ ಸುಮಾರು ಒಂದು ಶತಮಾನಕ್ಕಿಂತಲೂ ಹೆಚ್ಚಿನ ಕಾಲದ್ದಾಗಿದೆ. ಆ ಸೇತುವೆ ಮೇಲೆ ಕಬ್ಬಿಣದ ಕಂಬಗಳನ್ನು ತುಂಬಿದಂತಹ ಅನೇಕ ದೊಡ್ಡ ವಾಹನಗಳು ಕುದುರೆ ಮುಖಕ್ಕೆ ಹೋಗುತ್ತವೆ ಆಗ ಅದು ಜರುಗಿದ ಹಾಗಾಗುತ್ತದೆ. ಇದು ಹಳೆಯ ಸೇತುವೆಯಾಗಿರುವುದರಿಂದ ಒಂದು ಪಕ್ಷ ಅದು ಕುಸಿದರೆ ಮತ್ತೆ ಆ ಕಡೆ ಬೇಲೂರು ಪಟ್ಟಣ ಅಲ್ಲದೆ ಮೂಡಿಗೆರೆ, ಧರ್ಮಸ್ಥಳ, ಉಡುಪಿ ಈ ಕಡೆ ಹೋಗತಕ್ಕಂತಹ ವಾಹನಗಳಿಗೆ ತೊಂದರೆಯಾಗುತ್ತದೆ. ಆದ್ಯಷ್ಟಿಯಿಂದ ಅದನ್ನು ಈ ವರ್ಷದ ಬಡ್ಜೆಟ್ಟಿಗೆ ಸೇರಿಸಿ ಈ ಸೇತುವೆಯನ್ನು ನಿರ್ಮಾಣ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?